INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -03,May-June, 2026
Page No,101-108
Peer -Reviewed, Refereed Journal

# ಕರ್ನಾಟಕದಲ್ಲಿ ವೃದ್ಧಾಶ್ರಮಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಡಾ. ಪೂರ್ಣಿಮ ಬಿ.[1]

ಭಾರತದಲ್ಲಿ ಕೈಗಾರಿಕರಣ, ನಗರೀಕರಣ, ಪಾಶ್ಚಾತೀಕರಣದ ಪಕ್ರಿಯೆಗಳಿಂದಾಗಿ 18ನೇ ಶತಮಾನದಲ್ಲಿ ಬದಲಾವಣೆಗಳು ಪ್ರಾರಂಭಗೊಂಡು 21ನೇ ಶತಮಾನದಲ್ಲೂ ಅವ್ಯಾಹತವಾಗಿ ಮುಂದುವರೆಯುತ್ತಲೇ ಇದೆ. ಈ ಹಿನ್ನೆಯಲ್ಲಿ ಕುಟುಂಬ, ವಿವಾಹ, ಜಾತಿ, ಆಸ್ತಿ, ಕಾನೂನು, ಶಿಕ್ಷಣ ಮೊದಲಾದ ಸಾಮಾಜಿಕ ಸಂಸ್ಥೆಗಳು ಸಾಂಪ್ರದಾಯಿಕತೆಯ ಬದಲಾಗಿ ಹೊಸ ಮಾದರಿಯ ಸ್ವರೂಪವನ್ನು ಪಡೆದುಕೊಂಡವು. ಭಾರತೀಯ ಸಾಂಪ್ರದಾಯಿಕ ಸಾಮಾಜದ ಮೂಲಾಧಾರವಾದ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಬದಲಾದವು. ಕುಟುಂಬದ ರಚನೆಯಲ್ಲಾದ ಬದಲಾವಣೆಗಳಿಂದಾಗಿ ಅದರ ಕಾರ್ಯಗಳು ಅಂಗನವಾಡಿ, ಶಿಶುವಿಹಾರಗಳು, ಶಾಲೆ, ವೃದ್ಧಾಶ್ರಮಗಳು ಇಂತಹ ಹೊಸ ಮಾದರಿಯ ಸಂಸ್ಥೆಗಳಿಗೆ ವರ್ಗಾವಣೆಗೊಂಡವು. ಬದಲಾವಣೆಯ ಪರಿಣಾಮವಾಗಿ ವೃದ್ಧಾಶ್ರಮಗಳು ಅಸ್ಥಿತ್ವಕ್ಕೆ ಬಂದವು. 60ವರ್ಷಕ್ಕೆ ಮೇಲ್ಪಟ್ಟ ವಯೋಮಾನದವರನ್ನು ವೃದ್ಧರು ಎಂದು ಕರೆಯಲಾಗುತ್ತದೆ. ಉದ್ಯೋಗನಿರತ ಮಕ್ಕಳು, ಪೋಷಕರನ್ನು ಪಾಲನೆ–ಪೋಷಣೆ ಮಾಡಲು ಸಮಯದ ಕೊರತೆ ಅಥವಾ ಜವಾಬ್ದಾರಿಯನ್ನು ತೆಗೆದುಕೊಳ್ಳದ ಕುಟುಂಬದ ಸದಸ್ಯರು ಹೀಗೆ ಅನೇಕ ಕಾರಣಗಳಿಂದಾಗಿ ನಿರಾಶ್ರಿತರಾದ ವೃದ್ಧರು ವೃದ್ಧಾಶ್ರಮಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ವೃದ್ಧಾಶ್ರಮಗಳು ವಸತಿ, ಆರೋಗ್ಯ ರಕ್ಷಣೆ, ಆಹಾರ ಭದ್ರತೆ, ಸಾಮಾಜಿಕ ಭದ್ರತೆಯನ್ನು ಒದಗಿಸುವ ಆಶ್ರಯತಾಣಗಳಾಗಿ ಬೆಳೆಯುತ್ತಿವೆ.

***ಮುಖ್ಯ ಪದಗಳು:*** *ಸಾಮಾಜಿಕ ಬದಲಾವಣೆ, ಸಾಮಾಜಿಕ ಸಂಸ್ಥೆ, ಅವಿಭಕ್ತ ಕುಟುಂಬ, ವಿಭಕ್ತ ಕುಟುಂಬ, ವೃದ್ಧರು, ವೃದ್ಧಾಶ್ರಮ,*

**ಪೀಠಿಕೆ:**

ಪ್ರಪಂಚದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೇಶಗಳಲ್ಲಿ ಭಾರತವು ಎರಡನೇ ದೇಶವಾಗಿದೆ. 2011 ರ ಜನಗಣತಿಯ ಪ್ರಕಾರ 121,19,0419 (1.21 ಬಿಲಿಯನ್) ದೇಶದ ಒಟ್ಟು ಜನಸಂಖ್ಯೆ, ಇದರಲ್ಲಿ 10.38 ಕೋಟಿ ಜನರು ವೃದ್ಧರಿದ್ದಾರೆ. ಅಂದರೆ ಒಟ್ಟು ಜನರಲ್ಲಿ 8.6 ಶೇ. ದಷ್ಟು

[1].ಸಹ ಪ್ರಾಧ್ಯಾಪಕರು,ಸಮಾಜಶಾಸ್ತ್ರ ವಿಭಾಗ,ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಹೊಳೆನರಸೀಪುರ.

ವೃದ್ಧರಿದ್ದಾರೆ. ಈ ಜನಸಂಖ್ಯೆಯಲ್ಲಿ 5.2 ಕೋಟಿ ಮಹಿಳೆಯರು ಹಾಗೂ 5.08 ಕೋಟಿ ಪುರುಷರಿದ್ದಾರೆ. Government of India's National Commission on Population Report of the Technical Group on Population Projection(2011-2036)ರ 2020ರಲ್ಲಿ ನೀಡಿದ ವರದಿಯ ಪ್ರಕಾರ 2036ರ ವೇಳೆಗೆ ಭಾರತದಲ್ಲಿ ವೃದ್ಧರ ಸಂಖ್ಯೆಯು 22.7 ಕೋಟಿಗೆ ತಲುವುದು. ಅಂದರೆ ಒಟ್ಟು ಜನರಲ್ಲಿ ವೃದ್ಧರ ಸಂಖ್ಯೆ ಶೇ. 15 ರಷ್ಟು ಏರಿಕೆಯಾಗುತ್ತದೆ. NSO (National Statistical Office) ಸಂಸ್ಥೆಯು 2021 ರಲ್ಲಿ Elderly in India ಎಂಬ ವಿಷಯಾಧಾರಿತ ನಡೆದ ಸಮೀಕ್ಷೆಯಲ್ಲಿ 13.8 ಕೋಟಿ ಜನರು 60 ವರ್ಷ ದಾಟಿದ ಜನರು ಇದ್ದಾರೆ, ಇದು ಅವಲಂಬಿತರ ಬೆಳವಣಿಗೆಯನ್ನು ಸೂಚಿಸುತ್ತದೆ ಅಲ್ಲದೆ ಅವಲಂಬಿತ ವರ್ಗದ ಬೆಳವಣಿಗೆಯೆಂದು ಪರಿಗಣಿಸಲಾಗಿದೆ.

The United Nations(UN), General Assemly 2021 - 2030 ರ ದಶಕವನ್ನು Health Age ಎಂದು ಘೋಷಣೆ ಮಾಡಿದೆ. ಈ ನಿಟ್ಟಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು' ಜಾಗತಿಕವಾಗಿ ಸಹಯೋಗದೊಂದಿಗೆ ವೃದ್ಧರ ಜೀವನವನ್ನು ಸುಧಾರಿಸುವುದು, ಆರೋಗ್ಯ ಅಸಮಾನತೆಗಳನ್ನು ಕಡಿಮೆಗೊಳಿಸುವುದು, ಅವರ ಕುಟುಂಬಗಳು ಹಾಗೂ ಸಮುದಾಯಗಳು ಒಟ್ಟಾಗಿ ಕಾರ್ಯಪ್ರವೃತ್ತರಾಗುವುದು; ಅದರಲ್ಲೂ ಮುಖ್ಯವಾಗಿ ನಾಗರಿಕ ಸಮಾಜ, ಅಂತರಾಷ್ಟ್ರೀಯ ಸಂಸ್ಥೆಗಳು, ಸೇವಾ ಸಂಸ್ಥೆಗಳು, ಮಾಧ್ಯಮಗಳು, ಖಾಸಗೀ ಸಂಸ್ಥೆಗಳು ಎಲ್ಲಾ ಒಟ್ಟಾಗಿ ಕಾರ್ಯೋನ್ಮುಖವಾದಾಗ ಅವರ ಜೀವನದ ಬಗ್ಗೆ ಇರುವ ಚಿಂತನೆಯನ್ನು ಬದಲಾಯಿಸಬಹುದು.

- 1999 ರ ರಾಷ್ಟ್ರೀಯ ವೃದ್ಧರ ನೀತಿಯ ಪ್ರಕಾರ(National Policy on Older Persons)– ಅರವತ್ತು ಹಾಗೂ ಅರವತ್ತು ವರ್ಷ ದಾಟಿದ ಯಾವುದೇ ನಾಗರಿಕನನ್ನು ವೃದ್ಧರು ಎಂದು ಪರಿಗಣಿಸಲಾಗುವುದು.
- Income Tax Act and the Maintance and Welfare of Parents and Senior Citizen Actನ ಪ್ರಕಾರ ೬೦ ವರ್ಷ ದಾಟಿದ ವ್ಯಕ್ತಿ ಸರ್ಕಾರವು ಹಿರಿಯರಿಗಾಗಿ ನೀಡಿದ ಎಲ್ಲಾ ಸವಲತ್ತುಗಳನ್ನು ಪಡೆಯಲು ಅರ್ಹನಿರುತ್ತಾನೆ.
- ಭಾಟಿಯ (1983) ರವರ ಪ್ರಕಾರ 'ವಯಸ್ಸಾಗುವಿಕೆ' ಎಂಬ ವಿಷಯ ವಿಶಾಲವಾದುದು ಮತ್ತು ಇದನ್ನು ಜೈವಿಕವಾಗಿ, ಮಾನಸಿಕವಾಗಿ ಹಾಗೂ ಸಾಮಾಜಿಕ– ಸಾಂಸ್ಕೃತಿಕವಾಗಿ, ಹೀಗೆ ಮೂರು ರೀತಿಗಳಲ್ಲಿ ಅಧ್ಯಯನ ಮಾಡಬೇಕು ಎಂದಿದ್ದಾರೆ.
- ವಿಕಿಪೀಡಿಯಾದ ಪ್ರಕಾರ– 'ವಯಸ್ಸಾಗುವಿಕೆಯು ಒಂದು ಜೀವಿಯಲ್ಲಿ ಆಗುವ ಪರಿವರ್ತನೆಗಳು, ಮಾನಸಿಕ, ಶಾರೀರಿಕ ಹಾಗೂ ಸಾಮಾಜಿಕ ಪರಿವರ್ತನೆಗಳನ್ನು ಒಳಗೊಂಡ ವಿವಿಧ ಹಂತಗಳ ಪ್ರಕ್ರಿಯೆಯಾಗಿದೆ'.

ವೃದ್ಧಾಪ್ಯದ ಹಂತದಲ್ಲಿರುವ ವೃದ್ಧರು ಕಠಿಣ ಕೆಲಸಗಳನ್ನು ಮಾಡಲಾಗದೆ ಅಥವಾ ಕೆಲವೊಮ್ಮೆ ವೈಯಕ್ತಿಕ ಕೆಲಸಗಳಿಗೂ ಅಡ್ಡಿಯಾಗುವ ದೈಹಿಕ ಹಾಗೂ ಮಾನಸಿಕ ಕುಗ್ಗುವಿಕೆ ಕಾಣಿಸಿಕೊಳ್ಳುವುದು, ನರ ಸಂಬಂದೀ ರೋಗಗಳು, ಸಕ್ಕರೆ ರೋಗ, ಅಧಿಕ ರಕ್ತದೊತ್ತಡ, ಕೀಲುಗಳಲ್ಲಿ ನೋವು, ಮರೆವಿನ

ಖಾಯಿಲೆ, ಹೃದ್ರೋಗ, ದೃಷ್ಟಿ ದೋಷ, ಕಿವುಡತನ, ಅತಿ ಮೂತ್ರ ರೋಗ, ಮಾನಸಿಕ ಸಂಬಂಧೀ ಸಮಸ್ಯೆಗಳು ಬಾಧಿಸುತ್ತವೆ. ಇಂತಹ ವಯೋಸಹಜ ದೌರ್ಬಲ್ಯಗಳು, ಅವರನ್ನು ಕಾಡುವ ರೋಗಗಳು ಅವರನ್ನು ಸ್ವತಂತ್ರವಾಗಿ ಬದುಕು ನಡೆಸಲು ಅಡ್ಡಿಯನ್ನುಂಟುಮಾಡುತ್ತವೆ ಮತ್ತು ಇತರರನ್ನು ಅವಲಂಬಿಸಿ ಬದುಕುಬೇಕಾಗುತ್ತದೆ. ಆದ್ದರಿಂದ ಕುಟುಂಬ ಅವರ ಆಸರೆಯಾಗಬೇಕು ಮತ್ತು ಹೆಚ್ಚಿನ ಕಾಳಜಿವಹಿಸಬೇಕು.

ಹೆಚ್.ಸಮ್ನರ್ ಮೇನ್ ರವರ ಅಭಿಪ್ರಾಯದಂತೆ–'ಅವಿಭಕ್ತ ಕುಟುಂಬವು ಮಕ್ಕಳು, ವೃದ್ಧರು, ಮಹಿಳೆಯರು, ನಿರುದ್ಯೋಗಿಗಳು ಮತ್ತು ಅಂಗವಿಕಲರಿಗೆ ಆಸರೆಯಾಗಿದ್ದವು; ಎಲ್ಲಾ ರೀತಿಯ ಕಾಳಜಿ ತೋರಿಸುತ್ತಿತ್ತು, ವೃದ್ಧರ ಆರ್ಥಿಕ ಮತ್ತು ಭಾವನಾತ್ಮಕ ಬೇಡಿಕೆಗಳನ್ನು ಈಡೇರಿಸುತ್ತಿತ್ತು, ಅವರಿಗೆ ಎಲ್ಲಾ ರೀತಿಯ ಸಾಮಾಜಿಕ ಭದ್ರತೆ ಒದಗಿಸುತ್ತಿತ್ತು. ಹೆಂಡತಿಯನ್ನು ಕಳೆದುಕೊಂಡ ವಿಧುರ, ಗಂಡನನ್ನು ಕಳೆದುಕೊಂಡ ವಿಧವೆ, ಪಾಲಕರನ್ನು ಕಳೆದುಕೊಂಡ ಅನಾಥ ಮಕ್ಕಳು, ವಯೋವೃದ್ಧ ರೋಗಿಗಳು ಎಲ್ಲರಿಗೂ ಅವಿಭಕ್ತ ಕುಟುಂಬ ಆಶ್ರಯ ನೀಡುತ್ತಿತ್ತು'.

ಆದರೆ ಇಂದು ಅವಿಭಕ್ತ ಕುಟುಂಬಗಳು ರಚನೆಯಲ್ಲಿ ಬದಲಾವಣೆಗೊಂಡು ಮತ್ತು ಅವುಗಳ ಕಾರ್ಯಗಳನ್ನು ಅಂಗನವಾಡಿಗಳು, ಬಾಲವಾಡಿಗಳು, ಶಿಶುವಿಹಾರಗಳು, ವೃದ್ಧಾಶ್ರಮಗಳು ಮೊದಲಾದ ಹೊಸ ಮಾದರಿಯ ಸಂಸ್ಥೆಗಳು ನಿರ್ವಹಿಸುತ್ತಿವೆ. ಆದರೆ ಇಂದಿನ ಚಿಕ್ಕ ಕುಟುಂಬಗಳಲ್ಲಿ ಉದ್ಯೋಗನಿರತ ದಂಪತಿಗಳು, ಸಮಯದ ಕೊರತೆ, ಪೋಷಕರನ್ನು ಪಾಲನೆಯ ಜವಾಬ್ದಾರಿಗಳನ್ನು ತೆಗೆದುಕೊಳ್ಳದ ಕುಟುಂಬದ ಸದಸ್ಯರು, ಆಸ್ತಿ–ಹಣ ವಿಚಾರಗಳಿಗೆ ಸಂಬಂಧಿಸಿದ ಕಲಹಗಳಿಂದಾಗಿ ಮನೆಯಿಂದ ಹೊರಹಾಕಲ್ಪಟ್ಟ ಹಿರಿಯರು, ಆಶ್ರಯ ವಂಚಿತರು, ವಿದೇಶಗಳಲ್ಲಿ ಶಾಶ್ವತವಾಗಿ ನೆಲೆಗೊಂಡ ಮಕ್ಕಳ ಪೋಷಕರು, ಸಂತತಿ ಇಲ್ಲದವರು, ಅನಾಥ ಮತ್ತು ನಿರಾಶ್ರಿತ ಹಿರಿಯ ವೃದ್ಧರು, ದೀರ್ಘಕಾಲಿಕ ರೋಗಗಳಿಂದ ಬಾದೆಪಡುತ್ತಿರುವ ವೃದ್ಧರು ವೃದ್ಧಾಶ್ರಮಗಳ ಆಶ್ರಯ ಪಡೆಯುತ್ತಿದ್ದಾರೆ.

**ವೃದ್ಧಾಪ್ಯ ಹಾಗೂ ವಯಸ್ಸಾಗುವಿಕೆ:**

ಜನಸಂಖ್ಯಾಶಾಸ್ತ್ರದ ಪ್ರಕಾರ ಜನಸಂಖ್ಯೆಗೆ ವಯಸ್ಸಾಗುವಿಕೆ ಒಂದು ಜಾಗತಿಕ ವಿದ್ಯಮಾನವಾಗಿದೆ. ಮನುಷ್ಯ ತನ್ನ ಜೀವಿತಾವಧಿಯಲ್ಲಿ ಶೈಶಾವಸ್ಥೆ, ಬಾಲ್ಯಾವಸ್ಥೆ, ಯೌವನಾವಸ್ಥೆ ಹಾಗೂ ವೃದ್ಧಾಪ್ಯದ ಹಂತಗಳನ್ನು ಸಹಜವಾಗಿ ತಲುಪುತ್ತಾನೆ. ಜೀವನದ ಅಂಚಿನಲ್ಲಿರುವವರನ್ನು ಹಿರಿಯನಾಗರಿಕರು, ವೃದ್ಧರು, ವಯೋವೃದ್ಧರು, ಹಿರಿಯರು ಎಂದು ಕರೆಯಲಾಗುತ್ತದೆ. ವೃದ್ಧಾಪ್ಯತೆ ಸಹಜವಾಗಿ ಆಗುವ ಜೈವಿಕ ಬದಲಾವಣೆಯಾಗಿದೆ. ಜನಸಂಖ್ಯೆಯ ವಯೋರಚನೆಯನ್ನು ಮಕ್ಕಳು, ಯವಕರು ಹಾಗೂ ವೃದ್ಧರು ಎಂದು ವಿಂಗಡಿಸಲಾಗುವುದು. ಭಾರತವು ಅತೀ ಹೆಚ್ಚು ವೃದ್ಧರನ್ನು ಹೊಂದಿರುವ ಎರಡನೇ ರಾಷ್ಟ್ರ ಎಂದು ಕರೆಯಲಾಗುತ್ತದೆ.

**ಕೋಷ್ಟಕ:01, 1951 ರಿಂದ 2011 ರ ಜನಗಣತಿಯ ಪ್ರಕಾರ ವ್ಯಕ್ತಿಯ ಸರಾಸರಿ ಜೀವಿತಾವಧಿಯನ್ನು ತೋರಿಸುವ ಪಟ್ಟಿ:**

| ಜನಗಣತಿ ವರ್ಷ | ಸರಾಸರಿ ಜೀವಿತಾವಧಿ | ಪುರುಷರ ಸರಾಸರಿ ಜೀವಿತಾವಧಿ | ಮಹಿಳೆಯರ ಸರಾಸರಿ ಜೀವಿತಾವಧಿ |
|---|---|---|---|
| 1951 | 32–37 | 32 | 36.2 |
| 1961 | 41.89 | 37.42 | 36.41 |
| 1971 | 45.49 | 47.1 | 45.6 |
| 1981 | 54.54.2 | 54–54.7 | 54.3–55.3 |
| 1991 | 59.4 | 59.70 | 60.90 |
| 2001 | 62.7 | 62.3 | 63.9 |
| 2011 | 66.87 | 65.5 | 68.2 |
| 2021* | 69.8 | 69.5 | 73.1 |

**ಮೂಲ: 1.ಆರೋಗ್ಯ ಮತ್ತು ಕುಟುಂಬ ಅಭಿವೃದ್ಧಿ ಸಚಿವಾಲಯ ಮತ್ತು ಭಾರತ ಜನಗಣತಿಗಳು**
**2.ಮಾದರಿ ನೋಂದಣಿ ಸಮೀಕ್ಷೆ, ಭಾರತದ ರಿಜಿಸ್ಟರ್ ಜನರಲ್ ಕಛೇರಿ, 2021***

1951ರಲ್ಲಿ ಸ್ವಾತಂತ್ರ್ಯ ನಂತರದ ಮೊದಲ ಜನಗಣತಿಯನ್ನು ನಡೆಸಲಾಗಿತ್ತು. ಒಬ್ಬ ವ್ಯಕ್ತಿಯ ಸರಾಸರಿ ಜೀವಿತಾವಧಿಯು 32 ರಿಂದ 37 ವರ್ಷಗಳು ಎಂದು ಅಂದಾಜು ಮಾಡಲಾಗಿತ್ತು. 2011 ರ ಜನಗಣತಿಯ ವರದಿಯ ಪ್ರಕಾರ 66.87 ವರ್ಷಗಳಾಗಿವೆ. ಈ ಆರು ದಶಕಗಳ ನಡುವಿನ ವ್ಯತ್ಯಾಸ ದೊಡ್ಡ ಪ್ರಮಾಣದಲ್ಲಿದೆ, ಮಾದರಿ ನೋಂದಣಿ ಸಮೀಕ್ಷೆ – ಆದರೆ 1990 ದಶಕದ ಪೂರ್ವದಲ್ಲಿ ವ್ಯಕ್ತಿಯ ಸರಾಸರಿ ಜೀವಿತದ ಅವಧಿ 58.15 ವರ್ಷವಾಗಿದ್ದು, 1991 ನಂತರ ಘನ ಸರ್ಕಾರಗಳು ಅನುಷ್ಠಾನಗೊಳಿಸಿದ ಆರೋಗ್ಯ ಕಾರ್ಯಕ್ರಮಗಳು, ಪೌಷ್ಠಿಕ ಆಹಾರ ಹಾಗೂ ನೈರ್ಮಲ್ಯ ಕಾರ್ಯಕ್ರಮಗಳು, ಅರಿವು ಮೂಡಿಸುವ ಕಾರ್ಯಕ್ರಮಗಳು ಜನರಿಗೆ ದೊರೆಯುತ್ತಿರುವುದರಿಂದ 2016 ರಿಂದ 2020 ರ ಅವಧಿಯಲ್ಲಿ ಜೀವಿತಾವಧಿಯು ಹೆಚ್ಚಾಗಲು ಕಾರಣವಾಯಿತು.

2020–2021 ರಲ್ಲಿ ಮಾದರಿ ನೋಂದಣಿ ಸಮೀಕ್ಷೆಯ ಅಂಕಿ–ಅಂಶಗಳನ್ನು ಆಧರಿಸಿ ಭಾರತದ ರಿಜಿಸ್ಟರ್ ಜನರಲ್ ಕಛೇರಿಯು ಹೊರಡಿಸಿದ ವರದಿಯ ಪ್ರಕಾರ ಮಹಿಳೆಯರ ಸರಾಸರಿ ಜೀವಿತಾವಧಿ 73.1 ಯಾಗಿದ್ದು ಹಾಗೂ 69.5 ವರ್ಷಗಳು ಪುರುಷನ ಜೀವಿತಾವದಿಯಾಗಿದೆ. ಈ ಮೇಲಿನ ಕೋಷ್ಟಕದಲ್ಲಿ1951 ರಿಂದ 2011 ರ ಅವಧಿಯ ವರೆಗೆ ಭಾರತದಲ್ಲಿ ಪುರುಷರಿಗೆ ಹೋಲಿಕೆ ಮಾಡಿದರೆ ಮಹಿಳೆಯರ ಜೀವಿತಾವಧಿಯು ಹೆಚ್ಚಾಗಿರುವುದು ಅಂಕಿ–ಅಂಶಗಳಿಂದ ಸ್ಪಷ್ಟವಾಗಿದೆ. ಒಟ್ಟಾರೆ ದಶಕದಿಂದ ದಶಕಕ್ಕೆ ವ್ಯಕ್ತಿಯ ಸರಾಸರಿ ಬದುಕುವ ವರ್ಷಗಳು ಧೀರ್ಘವಾಗಿದೆ. ರಾಷ್ಟ್ರೀಯ ಆರೋಗ್ಯ ಮಿಷನ್‌ನ ಆರೋಗ್ಯ ಸೇವೆಗಳು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳ ಸ್ಥಾಪನೆ, ತಾಲ್ಲೂಕು ಹಾಗೂ ಜಿಲ್ಲಾ ಹಂತದ ಆಸ್ಪತ್ರೆಗಳು, ಜಿಲ್ಲಾ ವೈದ್ಯಕೀಯ ವಿದ್ಯಾಲಯಗಳು, ಆರೋಗ್ಯ ಯೋಜನೆಗಳು, ಉಚಿತ ಚಿಕಿತ್ಸೆ ಮತ್ತು ಔಷಧಿಗಳು, ಆರೋಗ್ಯದ ಖಾಳಜಿ ಮತ್ತು ಅರಿವು ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿರುವುದರಿಂದ ವ್ಯಕ್ತಿಗಳ ಜೀವಿತಾವಧಿ ಹೆಚ್ಚಾಗುತ್ತಿದೆ.

**ಕರ್ನಾಟಕದಲ್ಲಿ ವೃದ್ಧಾಶ್ರಮಗಳು:**

**ಕೋಷ್ಠಕ:02, ರಾಜ್ಯ ಸರ್ಕಾರದ ಅನುದಾನದಿಂದ ಸರ್ಕಾರೇತರ ಸಂಸ್ಥೆಗಳಿಂದ ನಡೆಯುತ್ತಿರುವ ಜಿಲ್ಲಾವಾರು ವೃದ್ಧಾಶ್ರಮಗಳು**

| ಕ್ರ. ಸಂ. | ಜಿಲ್ಲೆಗಳು | ' ವೃದ್ಧಾಶ್ರಮಗಳ ಸಂಖ್ಯೆ | ವೃದ್ಧಾಶ್ರಮಗಳು ಹೆಸರು ಮತ್ತು ವಿಳಾಸ |
|---|---|---|---|
| 1 | ಬೆಂಗಳೂರು(ನ) | 102 | ತುಂಗಭದ್ರ ವಿದ್ಯಾ ಸಂಸ್ಥೆ(ನೋ), ಮಲ್ಲೇಶ್ವರಂ, ಬೆಂಗಳೂರು |
| 2 | ಬೆಂಗಳೂರು(ಗ್ರಾ) | | ಚೇಶಿರೆ ಹೋಮ್ ಇಂಡಿಯಾ(ನೋ)ಮಣಿ ಹಾಸ್ಪಿಟಲ್ ರಸ್ತೆ, ಬೆಂಗಳೂರು |
| 3 | ಬೆಳಗಾವಿ | 03 | 1.ಶ್ರೀವನಕಲ್ಲು ಮಲ್ಲೇಶ್ವರ ಮಠ ವೃದ್ಧಾಶ್ರಮ, ಸೋಮ್‌ಪುರ (ಹೋ), ನೆಲಮಂಗಲ(ತಾ)<br>2.ಶ್ರೀ ಸಾಯಿನಾಥ್ ವೃದ್ಧಾಶ್ರಮ,<br>ಡಾ. ಬಿ ಆರ್ ಅಂಬೇಡ್ಕರ್ ಹರಿಜನ್ ಎಜುಕೇಷನ್ ಸೊಸೈಟಿ,<br>3. ಫರ್‌ಕುಲ ವೃದ್ಧಾಶ್ರಮ, |
| 4 | ಬೀದರ್ | 01 | ರಮಾಬಾಯಿ ಅಂಬೇಡ್ಕರ್ ಮಹಿಳಾ ಮಂಡಳ, ಔರಾದ್ (ತಾ) |
| 5 | ಬಾಗಲಕೋಟೆ | 01 | ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಹಿರಿಯ ನಾಗರೀಕರ ವೃದ್ಧಾಶ್ರಮ, ಬೀಳಗಿ (ತಾ) |
| 6 | ಚಿಕ್ಕಮಗಳೂರು | 02 | 1.ರೋಟರಿ ಮತ್ತು ಇನ್ನರ್ ವೀಲ್ ಟ್ರಸ್ಟ್, ಚಿಕ್ಕಮಗಳೂರು<br>2.ವಾನಪ್ರಸ್ತ ಆಶ್ರಮ |
| 7 | ಚಿಕ್ಕಬಳ್ಳಾಪುರ | 01 | ಚೈತನ್ಯಾ ವೃದ್ಧಾಶ್ರಮ, ಚಿಂತಾಮಣಿ (ತಾ) |
| 8 | ಚಿತ್ರದುರ್ಗ | 01 | ಶ್ರೀ ಶಕ್ತಿ ವೃದ್ಧಾಶ್ರಮ, ಚಳ್ಳಕೆರೆ ರಸ್ತೆ, ಚಿತ್ರದುರ್ಗ |
| 9 | ಚಾಮರಾಜನಗರ | 02 | ಜ್ಞಾನ ಸಿಂಧು ವೃದ್ಧಾಶ್ರಮ,<br>2. .ಸಚಿದ್ಯಾ ಸಾದನ ವೃದ್ಧಾಶ್ರಮ, ಕೊಳ್ಳೇಗಾಲ |
| 10 | ದಾರವಾಡ | 01 | 1.ಜೀವನ ಸಂದ್ಯಾ ವೃದ್ಧಾಶ್ರಮ<br>2.ವಿವೇಕಾನಂದ ವೃದ್ಧಾಶ್ರಮ<br>3.ಶ್ರೀ ಮೈತ್ರಿ ಮಹಿಳಾ ಮಂಡಳ ವೃದ್ಧಾಶ್ರಮ, ನವನಗರ್, ಹುಬ್ಬಳ್ಳಿ |
| 11 | ದಕ್ಷಿಣ ಕನ್ನಡ | 02 | 1.ಅಭಯ ಆಶ್ರಯ(ನೋ), ಮಂಗಳೂರು<br>2. ಜೀವನ ಸಂದ್ಯಾ ವೃದ್ಧಾಶ್ರಮ |
| 12 | ದಾವಣಗೆರೆ | 02 | 1.ಶ್ರೀ ಗುರು ತಿಪ್ಪ ರದ್ರಸ್ವಾಮಿ ಟಸ್ಟ್, ಬಸವಪಟ್ಟಣ, ಚನ್ನಗಿರಿ(ತಾ)<br>2. ಶ್ರೀ ಶಕ್ತಿ ಸಂಘ ದಾವಣಗೆರೆ |
| 13 | ಗದಗ್ | 03 | 1. ಶಾಂತಿಧಾಮ ವೃದ್ಧಾಶ್ರಮ, ಜಿ.ಎಫ್. ಉಪನಾಲ ಪ್ರತಿಸ್ಠಾನ, ಬೆಂಗಳೂರು ಶಾಖೆ, ಗದಗ್<br>2.ಜೀವನಜ್ಯೋತಿ ವೃದ್ಧಾಶ್ರಮ<br>3.ಸುರಭಿ ವೃದ್ಧಾಶ್ರಮ |
| 14 | ಹಾಸನ | 02 | 1.ಚೈತನ್ಯ ಮಂದಿರ ವೃದ್ಧಾಶ್ರಮ, ಗವೇನಹಳ್ಳಿ, ಕಾಮದೇನು ಸಹಕಾರಿ, ಹಾಸನ<br>2.ವಿದ್ಯಾಶ್ರಮ ನಿಯಮಿತ, ಚನ್ನರಾಯಪಟ್ಟಣ, |
| 15 | ಹಾವೇರಿ | 01 | ಶ್ರೀ ಶಕ್ತಿ ಸಂಘ, ಹಾವೇರಿ |
| 16 | ಕೊಡಗು | 01 | ಶ್ರೀ ಶಕ್ತಿ ವಿದ್ಯಾಶ್ರಮ, ಮಡಿಕೇರಿ |
| 17 | ಕಲಬುರ್ಗಿ | 01 | ಮಹದೇವಿ ತಾಯಿ ಮಹಿಳಾ ವಿದ್ಯಾವರ್ದಕ ಸಂಘ, ಕಲಬುರ್ಗಿ |
| 18 | ಕೋಲಾರ | 03 | 1.ದಿವ್ಯಜ್ಯೋತಿ ಎಜುಕೇಷನ್ ಮತ್ತು ಕಲ್ಚರಲ್ ಸೊಸೈಟಿ (ನೋ), ಶ್ರೀನಿವಾಸಪುರ (ತಾ), ಕೋಲಾರ<br>2.ಇಟಿಸಿಎಮ್– ನೈಂಟಿಗೇಲ್ಸ್ ಟ್ರಸ್ಟ್<br>3. ಸೇಂಟ್. ಗಾಸ್ಪರ್ಸ್ ವೃದ್ಧಾಶ್ರಮ |
| 19 | ಕೊಪ್ಪಳ | | ವಿದ್ಯಾನಚಿದ ಗೋಕುಲ ವೃದ್ಧಾಶ್ರಮ, ಕೊಪ್ಪಳ |

| | | | |
|---|---|---|---|
| 20 | ಮೈಸೂರು | 06 | 1.ಜೆ.ಎಸ್.ಎಸ್. ಹಿರಿಯರ ಮನೆ ವೃದ್ಧಾಶ್ರಮ,<br>2.ಅಕ್ಷಯ ವೃದ್ಧಾಶ್ರಮ<br>3.ಬಾಪೂಜಿ ಅನಂದ ಆಶ್ರಮ<br>4.ಜೀವನಿಧಿ ವೃದ್ಧಾಶ್ರಮ<br>5.ಜೆಎಂಜೆ ವೃದ್ಧಾಶ್ರಮ<br>6. ಲಿಟ್ಲ್ ಸಿಸ್ಟರ್ಸ್ ಆಫ್ ದಿ ಪೂರ್ |
| 21 | ಮಂಡ್ಯ | 01 | ಸೇವಾ ಕಿರಣ ವೃದ್ಧಾಶ್ರಮ, ಶುಭಾಷ್ ನಗರ, ಮಂಡ್ಯ ನಗರ(ರಾಜ್ಯದ ಅನುದಾನ) |
| 22 | ರಾಮನಗರ | 02 | 1.ಶಾಚಿತಲಾ ಚಾರಿಟಬಲ್ ಟ್ರಸ್ಟ್(ನೋ), ದಾರಿದೀಪ ವೃದ್ಧಾಶ್ರಮ, ಕೃಷ್ಣಾಪುರ ದೊಡ್ಡಿ ಹಳ್ಳಿ, ರಾಮನಗರ (ತಾ)<br>2.ಮುರಳಿಯ ವೃದ್ಧಾಶ್ರಮ, |
| 23 | ಶಿವಮೊಗ್ಗ | 04 | 1.ಶ್ರೀ ಮಾತೆ ಕಾಳಿಕಾದೇವಿ ಮಹಿಳಾ ವಿದ್ಯಾಸಂಸ್ಥೆ(ನೋ), ಜೀವನಕಿರಣ ವೃದ್ಧಾಶ್ರಮ, ಭದ್ರಾವತಿ (ತಾ), ಶಿವಮೊಗ್ಗ<br>2. ಜೆಎಂಜೆ ವೃದ್ಧಾಶ್ರಮ<br>3. ಸೊರಬ ಶ್ರೀ ಸಾಯಿ ವೃದ್ಧಾಶ್ರಮ<br>4.ಶ್ರೀ ಕಾಲಭೈರವೇಶ್ವ ವೃದ್ಧಾಶ್ರಮ<br>5. ಜೀವನಕಿರಣ ವೃದ್ಧಾಶ್ರಮ, ಭದ್ರಾವತಿ |
| 24 | ತುಮಕೂರು | 04 | 1.ಶ್ರೀ ಸಾಯಿ ವೃದ್ಧಾಶ್ರಮ, ಕಣಿವೆಹಳ್ಳಿ ಗೇಟ್, ತುಮಕೂರು ರಸ್ತೆ<br>2.ಮಧುಗಿರಿ ಶ್ರೀ ಶಿರಡಿ ಸಾಯಿ ವೃದ್ಧಾಶ್ರಮ<br>3.ಶ್ರೀ ದ್ವಾರಕಮಾಯಿ ವೃದ್ಧಾಶ್ರಮ<br>4.ಶ್ರೀ ಶಕ್ತಿ ಗಣಪತಿ ವೃದ್ಧಾಶ್ರಮ |
| 25 | ಉಡಪಿ | 08 | 1.ಕರಣಾಲಯ ವೃದ್ಧಾಶ್ರಮ, ಶಂಕರಪುರ ವಿಶ್ವಾಸದಮನೆ, ಉಡುಪಿ(ಜಿ)<br>2.ಪರ್ಫೆಕ್ಟುಯಲ್ ಹೆಲ್ಪ್ ವೃದ್ಧಾಶ್ರಮ<br>3.ಓಜನಾಮ್ ವೃದ್ಧಾಶ್ರಮ<br>4.ಆಶ್ರಯ ಹಿರಿಯರ ವೃದ್ಧಾಶ್ರಮ<br>5. ಲೈಫ್ ಕೇರ್ ವೃದ್ಧಾಶ್ರಮ<br>6. ಸಹಜೀವನ ಹೋಮ್<br>7.ಹೋಲಿ ಕ್ರಾಸ್ ವೃದ್ಧಾಶ್ರಮ<br>8.ಜಯರಾಣಿ ಹೆಲ್ತ್ ಸೆಂಟರ್ ಕಮ್ ಒಲ್ಡ್ ಎಜ್ ಹೋಮ್ |
| 26 | ವಿಜಯಪುರ | 01 | ಶ್ರೀ ಸಿದ್ದೇಶ್ವರ ವಿದ್ಯಾ ಪೀಠ(ನೋ), ತಾಳಿಕೋಟೆ, ವಿಶ್ರಾಂತಿ ವೃದ್ಧಾಶ್ರಮ, ಜುಮ್ಮನಾಲ್ ಕ್ರಾಸ್, ವಿಜಯಪುರ |
| 27 | ಯಾದ್‌ಗಿರ್ | 01 | ಅಕ್ಷತಾ ಮಹಿಳಾ ಮಂಡಳಿ ಯಾದ್‌ಗಿರ್ |
| 28 | ಬಳ್ಳಾರಿ, ವಿಜಯನಗರ | 02 | ಎಡಿಯೂರು ಶ್ರೀ ಸಿದ್ದಲಿಂಗೇಶ್ವರ ವಿದ್ಯಾ ಪೀಠ, ಬಳ್ಳಾರಿ<br>ಕೃಷ್ಣ ಸನ್ನಿದಿ ವೃದ್ಧಾಶ್ರಮ |
| 29 | ಮಂಗಳೂರು | 03 | 1.ಸೇಂಟ್. ಆನ್ ಹೋಮ್,<br>2. ಚಿರಂತನ ವೃದ್ಧಾಶ್ರಮ ಹಾಗೂ ಅಂಗವಿಕಲ<br>3. ಲಿಟ್ಲ್ ಸಿಸ್ಟರ್ಸ್ ಆಫ್ ದಿ ಪೂರ್ |

**ಮೂಲ: 1.ಕರ್ನಾಟಕ ಹಿರಿಯ ನಾಗರಿಕ ಸಬಲೀಕರಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, 2025–26**

**2. ಕರ್ನಾಟಕ ಓಲ್ಡ್ ಏಜ್ ಹೋಮ್ಸ್, *ಎಲ್ಡರ್ಲಿ ಕೇರ್ ಇಂಡಿಯಾ* https://elderlycareindia.org**

ಕರ್ನಾಟಕದಲ್ಲಿ ಪ್ರಸ್ತುತ 149 ವೃದ್ಧಾಶ್ರಮಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಕೆಲವು ಪೇ–ಸ್ಟೇ ಆಧಾರಿತವಾಗಿ ನಡೆಯುತ್ತವೆ. ಅಂದರೆ ಇಂತಹ ಕಡೆಗಳಲ್ಲಿ ಇರಲು ಬಯಸುವ ವೃದ್ಧರು ಮಾಸಿಕ ಹಣವನ್ನು ಸಂದಾಯ ಮಾಡುವ ಮೂಲಕವಾಗಿ ಆರೈಕೆ ಪಡೆಯಲು ಅವಕಾಶವಿದೆ. ಬೆಂಗಳೂರು

ವ್ಯಾಪ್ತಿಯಲ್ಲಿ ಶ್ರೀ ಸದ್ಗುರು ಸಾಯಿ ವೃದ್ಧಾಶ್ರಮ, ದಿವ್ಯ ಜ್ಯೋತಿ ವೃದ್ಧಾಶ್ರಮ, ಲಿಟ್ಲ್ ಸಿಸ್ಟರ್ಸ್ ಆಫ್ ದಿ ಪೂರ್ ಮತ್ತು ಇದರ ಎರಡು ಶಾಖೆಗಳು, ಆರ್ನ ಆಯು ಫೌಂಡೇಶನ್, ಶ್ರೀ ಶತಶೃಂಗ ವಿದ್ಯಾಸಂಸ್ಥೆ, ಶ್ರೀ ಶಿರಡಿ ಸಾಯಿ ಬಾಬಾ ಮಠ ವೃದ್ಧಾಶ್ರಮ, ಆಶ್ರಯ ವೃದ್ಧಾಶ್ರಮ, ಬೆಳಕು ವೃದ್ಧಾಶ್ರಮ, ಈಶ್ವರ ವೃದ್ಧಾಶ್ರಮ, ಜೆರೊಮ್ ಹೋಮ್, ಸಾಯಿಬಾಬಾ ಮತ್ತು ಅನಾಥಾಶ್ರಮ, ವೃದ್ಧರಿಗಾಗಿ ಸ್ಟಫೆನ್ಸ್ ಹೋಮ್, ಆಶಾ ನಿಲಯಂ ಮೊದಲಾದವು ಸಂಪೂರ್ಣ ಉಚಿತವಾದ ಸೇವೆಯನ್ನು ಒದಗಿಸುತ್ತಾ ಬರುತ್ತಿವೆ. ಮಂಗಳೂರಿನ ಲಿಟ್ಲ್ ಸಿಸ್ಟರ್ಸ್ ಆಫ್ ದಿ ಪೂರ್, ಹುಬ್ಬಳ್ಳಿಯ ವಿವೇಕಾನಂದ ವೃದ್ಧಾಶ್ರಮ, ಗದಗದಲ್ಲಿ ಜೀವನಜ್ಯೋತಿ ವೃದ್ಧಾಶ್ರಮ, ಶಾಂತಿಧಾಮ, ಸುರಭಿ ವೃದ್ಧಾಶ್ರಮಗಳು, ಹಾಸನದಲ್ಲಿ ಗಾಂಧೀ ವೃದ್ಧಾಶ್ರಮ, ಮೈಸೂರಿನ ಬಾಪೂಜೀ ಅನಂದ ಆಶ್ರಮ, ಜೆಎಸ್ಎಸ್ ಹಿರಿಯರ ಮನೆ, ಲಿಟ್ಲ್ ಸಿಸ್ಟರ್ಸ್ ಆಫ್ ದಿ ಪೂರ್, ಭದ್ರಾವತಿಯ ಜೀವನಕಿರಣ, ಶಿವಮೊಗ್ಗದ ಸೊರಬ ಶ್ರೀ ಸಾಯಿ ವೃದ್ಧಾಶ್ರಮ ಮತ್ತು ಶ್ರೀ ಕಾಲಭೈರವೇಶ್ವರ ವೃದ್ಧಾಶ್ರಮ ಹೀಗೆ ಅನೇಕ ವೃದ್ಧಾಶ್ರಮಗಳು ಉಚಿತ ಪೋಷಣೆ ಅಪೇಕ್ಷಿಸಿ ಬರುವ ವೃದ್ಧರ ರಕ್ಷಣೆಯ ಕೆಲಸದಲ್ಲಿ ತೊಡಗಿವೆ.

**ವೃದ್ಧಾಶ್ರಮಗಳ ಸೇವೆಗಳು:**

ಸಕ್ಕರೆ ರೋಗ, ಆರ್ಥರ್ಟೀಸ್, ಹೃದಯ ಸಂಬಂಧೀ ರೋಗಿಗಳಂತಹ ಧೀರ್ಘಕಾಲೀಕವಾಗಿ ನರಳುವವರನ್ನು, ಮರೆವಿನ ರೋಗ, ಮೂಳೆ ಮುರಿತದಿಂದ ಹಾಸಿಗೆ ಹಿಡಿದ ವೃದ್ಧರ ಆರೋಗ್ಯ ತಪಾಸಣೆಯನ್ನು ಸಮಯಕ್ಕೆ ಸರಿಯಾಗಿ ಮಾಡಿಸುವುದು. ರಕ್ತ – ಮೂತ್ರ ಪರೀಕ್ಷೆ, ಬಿಪಿ ಪರೀಕ್ಷೆ, ಫಿಸಿಯೋಥೆರಪಿ, ಔಷಧಿ ನೀಡಿಕೆಗೆ ಸಹಾಯ, ವೈಯಕ್ತಿಕ ಶುಚಿತ್ವ ಕಾಪಾಡುವ ಕ್ರಮಗಳು, ಊರುಗೋಲು, ಕನ್ನಡಕ, ಗಾಲಿ ಕುರ್ಚಿಗಳು, ಮೊದಲಾದ ವೈದ್ಯಕೀಯ ವೆಚ್ಚಗಳನ್ನು ವೃದ್ಧಾಶ್ರಮಗಳು ಭರಿಸುತ್ತಿವೆ ಮತ್ತು ಕೆಲವು ದಾನಿಗಳ ಕಡೆಯಿಂದ ಸಂಗ್ರಹ ಮಾಡುತ್ತಿವೆ. ಅಗತ್ಯ ಇದ್ದಾಗ ವೈದ್ಯರು ಖುದ್ದಾಗಿ ವೃದ್ಧಾಶ್ರಮಕ್ಕೆ ಭೇಟಿ ನೀಡುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವೃದ್ಧಾಶ್ರಮಗಳಲ್ಲಿ ವೃದ್ಧರು ತಮ್ಮ ದಿನನಿತ್ಯದ ಕೆಲಸಗಳನ್ನು ಸ್ವತಃ ತಾವೇ ಮಾಡಿಕೊಳ್ಳುವಂತೆ ಮಾರ್ಗದರ್ಶನ ಮಾಡಲಾಗುತ್ತದೆ. ಔಷಧಿಗಳನ್ನು ತೆಗೆದುಕೊಳ್ಳುವಂತೆ ಮನವರಿಕೆ ಮಾಡುವುದು, ಮನರಂಜನೆಗಾಗಿ ದೂರದರ್ಶನ, ದಿನಪತ್ರಿಕೆಗಳು ಮೊದಲಾದ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಸಮಯಕ್ಕೆ ಸರಿಯಾಗಿ ಊಟ–ಬೆಳಗಿನ ಉಪಹಾರ, ಕಾಫಿ–ಟೀ, ಹಾಸಿಗೆ–ಹೊದುಪುಗಳು, ಉಡುಪುಗಳು ಮೊದಲಾದ ಎಲ್ಲಾ ರೀತಿಯ ದಿನನಿತ್ಯದ ವಸ್ತುಗಳನ್ನು ಒದಗಿಸಲಾಗುತ್ತಿದೆ.

**ಉಪಸಂಹಾರ:**

ಕರ್ನಾಟಕ ರಾಜ್ಯದಲ್ಲಿ ವೃದ್ಧಾಶ್ರಮಗಳು ವರ್ಷದಿಂದ–ವರ್ಷಕ್ಕೆ ಸಂಖ್ಯೆಯಲ್ಲಿ ಹೆಚ್ಚಾಗುತ್ತಿರುವುದು ಆರೋಗ್ಯಕರ ಸಮಾಜದ ಲಕ್ಷಣವಲ್ಲ. ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಹಿರಿಯರ ನಾಗರಿಕರ ಜೀವನದ ಮೇಲೆ ಪ್ರಭಾವ ಬೀರುತ್ತಿವೆ. ವಿಭಕ್ತ ಕುಟುಂಬಗಳಲ್ಲಿ ಸಮಾಜೀಕರಣದ ಹಂತದಲ್ಲಿ ಮಕ್ಕಳಿಗೆ ಹೊಂದಾಣಿಕೆ, ಸಹಕಾರ, ಗೌರವ, ಪ್ರೀತಿ, ಖಾಳಜಿ ಇತರೆ ಸಾಮಾಜಿಕ ಮೌಲ್ಯಗಳನ್ನು ಕಲಿಸಬೇಕು. ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭಗೊಂಡು ಉನ್ನತ ಹಂತದ ಪಠ್ಯಕ್ರಮದಲ್ಲಿ ಇಂತಹ ಮೌಲ್ಯಗಳನ್ನು ಬೋಧಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣ ಮಾಡಲು ಮುಂದಾಗಬೇಕು. ಮಕ್ಕಳೂ ಸಹ ತಂದೆ–ತಾಯಿಯರನ್ನು ಹಾಗೂ ಪೋಷಕರನ್ನು ವೃದ್ಧಾಪ್ಯದಲ್ಲಿ ನಿರ್ಲಕ್ಷಿಸದೆ ಪೋಷಿಸುವಂತಹ

ಮೌಲ್ಯಯುತ ಶಿಕ್ಷಣವನ್ನು ನೀಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಇತ್ತೀಚೆಗೆ ಕರ್ನಾಟಕ ಉಚ್ಚ-ನ್ಯಾಯಾಲಯ ತೀರ್ಪು ನೀಡಿ ಯಾವ ಮಕ್ಕಳು ತಂದೆ-ತಾಯಿಗಳ ವೃದ್ಧಾಪ್ಯದಲ್ಲಿ ಪೋಷಣೆ ಮಾಡದ ಮತ್ತು ಜವಾಬ್ದಾರಿಯನ್ನು ಹೊರದವರು ತಂದೆ-ತಾಯಿಗಳಿಂದ ಪಡೆದ ಆಸ್ತಿಗೆ ಹಕ್ಕುದಾರರಲ್ಲ ಎಂಬ ಐತಿಹಾಸಿಕ ತೀರ್ಪು ನೀಡಿ ಎಚ್ಚರಿಸಿದೆ. ಈ ದಿಸೆಯಲ್ಲಿ ನಿರ್ಲಕ್ಷೆಗೆ ಒಳಗಾದ ಪೋಷಕರನ್ನು ಪಾಲನೆ ಮಾಡುತ್ತಿರುವ ವೃದ್ಧಾಶ್ರಮಗಳು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಸುತ್ತಿವೆ. ಕರ್ನಾಟಕ ಸರ್ಕಾರ ವೃದ್ಧಾಶ್ರಮಗಳನ್ನು ಸ್ಥಾಪಿಸುವ ಮೂಲಕ ಹಿರಿಯ ನಾಗರಿಕರಿಗೆ ಆಶ್ರಯ, ಆಹಾರ ಭದ್ರತೆ, ಆರ್ಥಿಕ ಬೆಂಬಲ, ವೈದ್ಯಕೀಯ ಸೌಲಭ್ಯಗಳನ್ನು ದೊರಕಿಸುವ ಹಿನ್ನೆಲೆಯಲ್ಲಿ ವೃದ್ಧಾಶ್ರಮಗಳಲ್ಲಿ ಉತ್ತಮ ಬದುಕು ನಡೆಸುವುದಕ್ಕೆ ಅವಕಾಶ ಕಲ್ಪಿಸಿದೆ.

## ಪರಾಮರ್ಶನ ಗ್ರಂಥಗಳು:


1. ಈರಮ್ಮ ಸಿ. ಮುಲಕುಂದ & ನಳಿನಿ ಬೆಂಗೇರಿ. 2020, *ಬದಲಾಗುತ್ತಿರುವ ಸಾಮಾಜಿಕ ಸಂಸ್ಥೆಗಳು*, ಸೃಷ್ಟಿ ಪ್ರಕಾಶನ,
2. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ. ಡಿಸೆಂಬರ್, 2020, *ಸ್ಟಡಿ ಆಫ್ ಸೀನಿಯರ್ ಸಿಟಿಜನ್ಸ್ ಇನ್ ಕರ್ನಾಟಕ.* ಕರ್ನಾಟಕ ಸರ್ಕಾರ, ಬೆಂಗಳೂರು https://kmea.karnataka.gov.in
3. ಕರ್ನಾಟಕ ಓಲ್ಡ್ ಏಜ್ ಹೋಮ್ಸ್, *ಎಲ್ಡರ್ಲಿ ಕೇರ್ ಇಂಡಿಯಾ,* https://elderlycareindia.org
4. ಕೀರ್ತಿ ಕೆ. ಕಾಳಿಂಗ & ರೇಣುಕ ಕುಮಾರ್. *ಸೋಶಿಯಾಲಜಿ ಆಫ್ ಏಜಿಂಗ್,* http://ddceutkal.ac.in
5. ರಾಜೇಶ ಎಮ್. ಸಿ. *ಓಲ್ಡ್ ಏಜ್ ಹೋಮ್ ಅಂಡ್ ಇಟ್ಸ್ ಇಂಪ್ಯಾಕ್ಟ್ ಆನ್ ಸೊಸೈಟಿ;* ಇನ್ ಇಂಟರ್ ನ್ಯಾಷನಲ್ ಜರ್ನಲ್ ಆಫ್ ಕ್ರಿಯೇಟಿವ್ ರೀಸರ್ಚ ಥಾಟ್ಸ್, ವಾಲ್ಯೂಂ 10, ಇಶ್ಯು 10, ಅಕ್ಟೋಬರ್ 2022. https://ijcrt.org
6. ಶಶಿಕುಮಾರ್. ಜುಲೈ, 2016 *ಪಾಪುಲೇಶನ್ ಸ್ಟಡೀಸ್ ಇನ್ ಇಂಡಿಯಾ,* ರಚನಾ ಪ್ರಕಾಶನ, ಮೈಸೂರು
7. ಶ್ರೀನಿವಾಸ ಕೆ. ಎನ್. *ಸ್ಟೇಟಸ್ ಆಫ್ ದಿ ಎಲ್ಡರ್ಲಿ ಅಂಡ್ ಎಮರ್ಜೆನ್ಸಿ ಆಫ್ ಓಲ್ಡ್ ಏಜ್ ಹೋಮ್ಸ್ ಇನ್ ಇಂಡಿಯಾ,* ಜರ್ನಲ್ ಆಫ್ ರೀಸರ್ಚ ಇನ್ ಹ್ಯುಮಾನಿಟೀಸ್ ಆಂಡ್ ಸೋಶಿಯಲ್ ಸೈನ್ಸ್, ವಾಲ್ಯೂಂ 11, ಇಶ್ಯು 4, 2023. www.questjournals.org
8. ಸುರೇಶ್ ಕಾಶಿನಾಥ ಘಾಟ್ಗೆ & ಅನುರಾಧಾ ಪರಾಸರ್, ಮೇ, 2024 *ಭಾರತದ ಹಿರಿಯ ನಾಗರಿಕರ ಸಮಸ್ಯೆಗಳು ಮತ್ತು ನಿರೀಕ್ಷೆಗಳು,* ಇನ್ https://doi.org/ijrsi.2024
9. ಸೆನ್ಸಸ್ ಆಫ್ ಇಂಡಿಯಾ, ರಿಪೋರ್ಟ್ 2017-21, https://censusindia.gov.in
10. ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ. ಸೆಪ್ಟೆಂಬರ್, 1989 *ಸೋಶಿಯೋ-ಎಕಾನಾಮಿಕ್ ಪ್ರೋಫೈಲ್ ಆಫ್ ದಿ ಏಜ್ಡ್ ಪರ್ಸನ್,* ಅಂಕಿ-ಸಂಖ್ಯೆಗಳ ಇಲಾಖೆ, ಹೊಸ ದೆಹಲಿ
11. https://dwdsc.karnataka.gov.in